# ಚುನಾವಣೆ – ಗೌರವಾನ್ವಿತ ಮತದಾರರ ಸ್ವಾಭಿಮಾನದ ಹೋರಾಟ

ವರದಿ




ಕೃಪಾ ಎಂ.ಎಂ.

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಂಯೋಜಕರು ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು.
ಮಧುರಸ್ಮೃತಿ, ಪೂರ್ಣಿಕ ರಸ್ತೆ, ಮಾರ್ಕೋಡು, ಕೋಟೇಶ್ವರ ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ.
ಮೊಬೈಲ್: 99453 75430


**ಗ್ರಾಮ ಸಭೆಗಳಲ್ಲಿ, ಕಾಲೇಜುಗಳಲ್ಲಿ, ಸ್ವಸಹಾಯ ಗುಂಪುಗಳಲ್ಲಿ ಒಟ್ಟಾಗಿ ಕುಳಿತು ಮತದಾನದ ಬಗ್ಗೆ ಆತ್ಮ ವಿಮರ್ಶೆ ಪ್ರಾರಂಭವಾಗಿದೆ. ಮನೆ-ಮನೆ ಭೇಟಿ ಮಾಡಿ ಮತದಾನದ ಪಾವಿತ್ರ್ಯತೆಯ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.**

ರಾಜ್ಯದಲ್ಲೀಗ ಪ್ರಜಾಪ್ರಭುತ್ವದ ಪರ್ವಕಾಲ. ಜನರ ಹಕ್ಕು ಚಲಾವಣೆಗೆ ಉಳಿದೆಲ್ಲಾ ಸಮಯಕ್ಕಿಂತಲೂ ಹೆಚ್ಚಿನ ಮನ್ನಣೆ ಸಿಗುವ, ಜನಾಭಿಪ್ರಾಯವೇ ಮೇಲುಗೈ ಸಾಧಿಸುವಂತಹ, ಜನರ ನೇರ ಭಾಗವಹಿಸುವಿಕೆಯೇ ಮಹತ್ವವಾಗಿರುವ ಚುನಾವಣೆಯ ಹೊಸ್ತಿಲಲ್ಲಿ ನಾವೀಗ ನಿಂತಿದ್ದೇವೆ. 6.11 ಕೋಟಿಗೂ ಮಿಕ್ಕಿ ಇರುವ ರಾಜ್ಯದ ನಾಗರಿಕರ ಪರವಾಗಿ, ಮತದಾನದ ಹಕ್ಕು ಇರುವ ಎಲ್ಲರೂ ಅತ್ಯಂತ ಸ್ವಾಭಿಮಾನದಿಂದ, ಹೆಮ್ಮೆಯಿಂದ ಸರ್ವರ ಅಭಿವೃದ್ಧಿಯನ್ನು, ಏಳ್ಗೆಯನ್ನು ಎದುರು ನೋಡುತ್ತಾ 224 ಜನಪ್ರತಿನಿಧಿಗಳನ್ನು ನಮ್ಮ ಪರವಾಗಿ ಒಟ್ಟಾಗಿ ಸೇರಿ 5 ವರ್ಷಗಳ ಕಾಲ ಸುಭದ್ರ, ಸ್ವಚ್ಛ, ಪಾರದರ್ಶಕ, ಆಡಳಿತ ನಡೆಸಲು ಆಯ್ಕೆ ಮಾಡಿ ಕಳುಹಿಸುವಂತಹ ಅತ್ಯಂತ ಮಹತ್ವದ ಘಟ್ಟ ಕಾಲವಿದು. ಇದು ರಾಜ್ಯದಾದ್ಯಂತ ನಡೆಯುವ ಜನತಂತ್ರದ ಮಹತ್ತರವಾದ ಪ್ರಕ್ರಿಯೆ. ಇದು ನಾಗರಿಕರಾದ ನಾವು, ಸಂವಿಧಾನದತ್ತ ಹಕ್ಕಾದ ಮತವನ್ನು ಜವಾಬ್ದಾರಿಯುತವಾಗಿ ಚಲಾಯಿಸಿ, ನಮ್ಮ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯತೆ ಎತ್ತಿಹಿಡಿಯುವ ಸಲುವಾಗಿ ಒಟ್ಟುಗೂಡಲು ಸಕಾಲವಾಗಿದೆ. ಗೌರವಾನ್ವಿತ ಮತದಾರರಾದ ನಾವು ನಮ್ಮೊಳಗಿನ ಸ್ವಾಭಿಮಾನದ ಆತ್ಮವಿಮರ್ಶೆ ಮಾಡಿಕೊಂಡು ಮೊದಲು ಜಾಗೃತರಾಗಬೇಕು. ಇದರೊಂದಿಗೆ ನಮ್ಮ ಸುತ್ತಮುತ್ತಲಿರುವ ಇತರ ಜನರಲ್ಲಿಯೂ ಸ್ವಚ್ಛ, ಸ್ವಯಂಪ್ರೇರಿತ, ಅರ್ಥಪೂರ್ಣ, ಸಂಪೂರ್ಣ ಗೌರವಯುತ ಮತದಾನ ಮಾಡುವಂತೆ ಜಾಗೃತಿ ಮೂಡಿಸುವ ಮಹತ್ಕಾರ್ಯ ಕೂಡಾ ನಮ್ಮಿಂದಾಗಬೇಕು.

ಈ ಚುನಾವಣೆಯ ಮೂಲಕ ನಮ್ಮಿಂದಲೇ ಆಯ್ಕೆಯಾಗಿ ಮುಂದೆ 5 ವರ್ಷ ನಮ್ಮ ಪರವಾಗಿ ಯೋಜನೆ-ಕಾರ್ಯಕ್ರಮ ಹಾಕಿಕೊಳ್ಳಲು, ಕಾಯಿದೆ-ನೀತಿ-ನಿಯಮ ರೂಪಿಸಲು ನಮ್ಮನ್ನು ಪ್ರತಿನಿಧಿಸುವ ಇವರು ನಿಜವಾಗಿಯೂ ಜನಪರ ಕಾಳಜಿ ಉಳ್ಳವರಾಗಿರಬೇಕು, ಜನರ ಸಮಗ್ರ ಅಭಿವೃದ್ಧಿಗೆ ಕಾರ್ಯತಂತ್ರ ರೂಪಿಸವ ಜಾಣ್ಮೆ ಉಳ್ಳವರಾಗಿರಬೇಕು. ಮಕ್ಕಳು, ಮಹಿಳೆಯರನ್ನೂ ಒಳಗೊಂಡಿರುವ ಬದಿಗೊತ್ತಲ್ಪಟ್ಟ



ವರ್ಗ, ಯುವಜನರು ಹೀಗೆ ವಿವಿಧ ವರ್ಗಗಳ, ವಲಯಗಳ ಅಗತ್ಯತೆಗಳನ್ನು ಅವರೊಂದಿಗೆ ಚರ್ಚಿಸಿ, ಅರಿತು, ಅವರ ಅಭಿವೃದ್ಧಿಗೆ ಪೂರಕವಾದ ಯೋಜನೆ-ಕಾರ್ಯಕ್ರಮ ರೂಪಿಸುವ ಮನೋಭಾವ ಉಳ್ಳವರಾಗಿರಬೇಕು. ಸಮತೆಯ ಆಧಾರದಲ್ಲಿ ಆದ್ಯತೆಯ ಮೂಲಕ ಕಾರ್ಯಕ್ರಮ-ಯೋಜನೆ ಅನುಷ್ಠಾನಗೊಳಿಸಲು ಮಾರ್ಗದರ್ಶನ ನೀಡುವ ಛಾತಿ ಉಳ್ಳವರಾಗಿರಬೇಕು. ಪ್ರಜಾತಂತ್ರ ವ್ಯವಸ್ಥೆಯನ್ನು ಇನ್ನೂ ಗಟ್ಟಿಗೊಳಿಸುವಲ್ಲಿ ನ್ಯಾಯಯುತ, ಜನಪರ, ಪಾರದರ್ಶಕ ಕಾನೂನು-ನೀತಿ-ನಿಯಮ ರೂಪಿಸವಂತೆ ಸರ್ಕಾರದ ಎಲ್ಲಾ ಪ್ರತಿನಿಧಿಗಳನ್ನು ಮನವೊಲಿಸುವ ಜಾಣ್ಮೆಯಿರಬೇಕು. ಇಂತಹ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕಾದ ಗುರುತರವಾದ ಜವಾಬ್ದಾರಿ ಈಗ ನಮ್ಮೆಲ್ಲರ ಮೇಲಿದೆ. ಈ ಜವಾಬ್ದಾರಿಯನ್ನು ನಾವೆಲ್ಲರೂ ದಿಟ್ಟತನದಿಂದ, ಸಮರ್ಥವಾಗಿ, ಯಾವುದೇ ರೀತಿಯ ಪೂರ್ವಾಗ್ರಹ ಪೀಡಿತರಾಗದೇ, ಆಸೆ-ಆಮಿಷಗಳಿಗೆ ಬಲಿಯಾಗದೇ ನಿಭಾಯಿಸಿದಾಗ ಮಾತ್ರ ಉತ್ತಮ ಸರ್ಕಾರವೊಂದನ್ನು ನಾವು ಕಾಣಬಹುದು.

ಈ ನಿಟ್ಟಿನಲ್ಲಿ ಈಗಾಗಲೇ ಜನರಲ್ಲಿ ಜಾಗೃತಿ ಮೂಡಿಸಲು ಚುನಾವಣಾ ಆಯೋಗ ರಾಜ್ಯದಾದ್ಯಂತ ಅರಿವು ಮೂಡಿಸುವ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದೆ. ಯುವಜನರಲ್ಲಿ ಜಾಗೃತಿ ಮೂಡಿಸುವತ್ತ, ಅವರ ಸಹಭಾಗಿತ್ವದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಅತ್ಯಂತ ವಿಶೇಷವಾದುದು ಹಾಗೂ ಅಗತ್ಯವಾದುದು. ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ಜಿಲ್ಲಾಡಳಿತ, ಹಾಗೂ ವಿವಿಧ ಕಾಲೇಜುಗಳ ಜೊತೆ ಸೇರಿ ವಿವಿಧ ವರ್ಗದ, ವಲಯದ ಜನರಿಗೆ ವಿಭಿನ್ನ ರೀತಿಯ ಮತದಾರರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. 'ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ' ಎಂಬ ಮತದಾರರ ಗೌರವದ, ಸ್ವಾಭಿಮಾನದ ಅಭಿಯಾನ ಜಿಲ್ಲೆಯಾದ್ಯಂತ ಈಗಾಗಲೇ ಬಿರುಸಿನಿಂದ ನಡೆಯುತ್ತಿದೆ.

ಗ್ರಾಮ ಸಭೆಗಳಲ್ಲಿ, ಕಾಲೇಜುಗಳಲ್ಲಿ, ಸ್ವಸಹಾಯ ಗುಂಪುಗಳಲ್ಲಿ ಒಟ್ಟಾಗಿ ಕುಳಿತು ಮತದಾನದ ಬಗ್ಗೆ ಆತ್ಮ ವಿಮರ್ಶೆ ಪ್ರಾರಂಭವಾಗಿದೆ. ಮನೆ-ಮನೆ ಭೇಟಿ ಮಾಡಿ ಮತದಾನದ ಪಾವಿತ್ರ್ಯತೆಯ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಜನರು **'ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ'** ಸ್ಟಿಕರ್ ಪಡೆದು ತಮ್ಮ ಮನೆಯ ಮುಂಭಾಗದ ಗೋಡೆಗೆ, ಬಾಗಿಲಿಗೆ, ತಮ್ಮ ವಾಹನಗಳಿಗೆ ಅಂಟಿಸಿಕೊಂಡು ಹೆಮ್ಮೆಯಿಂದ ಮತದಾನದ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಹಲವಾರು ಮಂದಿ ಅಂತಹ ಬ್ಯಾಡ್ಜ್‌ಗಳನ್ನು ಪಡೆದು ಪ್ರತಿನಿತ್ಯ ಚುನಾವಣೆ ಮುಗಿಯುವ ತನಕ ಅದನ್ನು ತಪ್ಪದೇ ಧರಿಸಿ, ತಾವೂ ಜಾಗೃತರಾಗಿರುವುದರೊಂದಿಗೆ, ಉಳಿದವರಿಗೂ ಜಾಗೃತಿ ಮೂಡಿಸುವ ನಿರ್ಧಾರ ಮಾಡಿದ್ದಾರೆ. 'ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ' ಅಂಗಿ ಧರಿಸಿ ಜಾಥಾ-ಮೆರವಣಿಗೆ, ಮಾನವ ಸರಪಳಿ,



ಬೀದಿ ನಾಟಕ – ಹೀಗೆ ವಿವಿಧ ಕಾರ್ಯಕ್ರಮಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಯುತ್ತಿದೆ. ಆ ಮೂಲಕ ಸಂವಿಧಾನಾತ್ಮಕವಾಗಿ ನಮಗೆ ನಾವು ಕೊಡಮಾಡಿಕೊಂಡ ಹಕ್ಕಾದ ಮತದಾನದ ಪಾವಿತ್ರ್ಯತೆಯನ್ನು ಯಾವುದೇ ಕಾರಣಕ್ಕೂ ಅಪವಿತ್ರಗೊಳಿಸುವುದಿಲ್ಲ, ಅಂತಹ ಪ್ರಯತ್ನಗಳಿಗೆ ಮಣೆಹಾಕುವುದಿಲ್ಲ, ಆಸ್ಪದಕೊಡುವುದಿಲ್ಲ ಎಂದು ಸ್ವಯಂ-ನಿರ್ಧಾರ ಮಾಡಿ ಪ್ರತಿಜ್ಞೆ ಗೈಯುತ್ತಿದ್ದಾರೆ. . ಹೀಗೆ ನಾವು ಯಾವುದೇ ಆಸೆ-ಆಮಿಷಗಳಿಗೆ, ಒತ್ತಡಗಳಿಗೆ ಒಳಗಾಗಿ ಮತ ಚಲಾಯಿಸುವುದಿಲ್ಲ ಎನ್ನುವ ಸಂದೇಶವನ್ನು ಆಮಿಷ ಒಡ್ಡುವಂತಹ ಅಭ್ಯರ್ಥಿಗಳಿಗೆ, ರಾಜಕೀಯ ಪಕ್ಷಗಳಿಗೆ ದಿಟ್ಟವಾಗಿ ತಲುಪಿಸುತ್ತಿದ್ದಾರೆ. ಮಕ್ಕಳು, ದುಡಿಯುವ ಮಕ್ಕಳು, ಮಹಿಳೆಯರು, ಯುವಜನರು ಹೀಗೆ ವಿವಿಧ ವರ್ಗದವರು ತಮ್ಮದೇ ಆದ ಪ್ರತ್ಯೇಕ ಪ್ರಣಾಳಿಕೆಗಳನ್ನು ತಯಾರಿಸಿ ಚುನಾವಣಾ ಕಣಕ್ಕಿಳಿಯುವ ಅಭ್ಯರ್ಥಿಗಳಿಗೆ ನೀಡುವ ತಯಾರಿಯಲ್ಲಿದ್ದಾರೆಮತವನ್ನು ಖರೀದಿಸುವುದಿಲ್ಲ, ಜನಪರ ದುಡಿಮೆಯಿಂದ ಮತ ಗಳಿಸುತ್ತೇನೆ, ಜನರ ಪ್ರತಿನಿಧಿಯಾಗಿ ಜನರ ನೈಜ ಅಭಿವೃದ್ಧಿಗೆ ಸಂಪೂರ್ಣ ಪ್ರಯತ್ನ ಮಾಡುತ್ತೇನೆ ಎನ್ನುವ ಘೋಷವಾಕ್ಯಕ್ಕೆ ಚುನಾವಣಾ ಅಭ್ಯರ್ಥಿಗಳಿಂದ ಸಹಿ ಪಡೆಯುವ ನಿರ್ಧಾರ ಮಾಡಿದ್ದಾರೆ. ತಮ್ಮ-ತಮ್ಮ ಊರು-ಕೇರಿ-ಪಟ್ಟಣ-ಬೀದಿಗಳ ಮುಖ್ಯ ಪ್ರದೇಶದಲ್ಲಿ, ಮನೆ-ಮನೆಗಳಲ್ಲಿ ಮತದಾನದ ಮಹತ್ವ, ಕಡ್ಡಾಯ ಮತದಾನ ಮಾಡುವ ಬಗ್ಗೆ ಅರಿವು ಮೂಡಿಸುವಲ್ಲಿ ಹುಮ್ಮಸ್ಸಿನ ಪ್ರಯತ್ನ ನಡೆಯುತ್ತಿದೆ.

ಕೇವಲ ಉಡುಪಿ ಜಿಲ್ಲೆಯಷ್ಟೇ ಅಲ್ಲದೇ, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ಥಳೀಯ ಕಾಲೇಜು, ಸಂಘ-ಸಂಸ್ಥೆಗಳ ಸಹಯೋಗದಲ್ಲಿಯೂ ಸಹ ಈ ಅಭಿಯಾನ ನಡೆಸುತ್ತಿದೆ. 2010ರ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಆರಂಭವಾದ ಈ ಅಭಿಯಾನ ಮತದಾರರಲ್ಲಿ ತಮ್ಮ ಜವಾಬ್ದಾರಿಯ ಅರಿವು ಮೂಡಿಸುವಲ್ಲಿ ಇಟ್ಟಂತಹ ಒಂದು ನಿರಂತರ ದೃಢ ಹೆಜ್ಜೆ ಎನ್ನಬಹುದು. ಪ್ರತಿಯೊಬ್ಬ ವ್ಯಕ್ತಿಯೂ ಈ ನಿಟ್ಟಿನಲ್ಲಿ ಆಲೋಚನೆ ಮಾಡುತ್ತಾ ಸರ್ವರ ಸರ್ವತೋಮುಖ ಅಭಿವೃದ್ಧಿಯನ್ನೇ ಮೂಲಮಂತ್ರವಾಗಿಟ್ಟುಕೊಂಡು, ಯಾವುದೇ ಹಿತಾಸಕ್ತಿಗಳಿಗೆ ಕಿವಿಯೊಡ್ಡದೇ, ಆಮಿಷಗಳಿಗೆ ಬಲಿಯಾಗದೇ ಸ್ವಯಂ ಘೋಷಿತ, ಸ್ವಯಂಚಾಲಿತ, ಸ್ವಯಂ ಬದಲಾವಣೆಗೆ ನಾಂದಿ ಹಾಡಿದರೆ; 'ಪರಿವರ್ತನಾ ಯಾತ್ರೆ', 'ಜನಾದೇಶ ಯಾತ್ರೆ', 'ಜನಾಶೀರ್ವಾದ ಯಾತ್ರೆ' 'ನವ ಕರ್ನಾಟಕ ನಿರ್ಮಾಣ ಯಾತ್ರೆ', 'ಕುಮಾರ ಪರ್ವ ಅಭಿಯಾನ' ಮುಂತಾದ ಯಾವುದೇ ಪ್ರಚಾರಾಂದೋಲನಗಳು ಅಗತ್ಯತೆ ಕಳೆದುಕೊಳ್ಳುತ್ತವೆ. ಸ್ವ-ಹಿತಾಸಕ್ತಿಗೆ, ಸ್ವಂತ ಲಾಭಕ್ಕಾಗಿ, ಅಧಿಕಾರ ದಾಹ ತಣಿಸಿಕೊಳ್ಳಲು ಪರಸ್ಪರ ಕಿತ್ತಾಡಿ, ಜನರ ಅಗತ್ಯತೆಗಳನ್ನು ಕಡೆಗಣಿಸಿ, ಜನತೆಗೆ ಚುನಾವಣಾ ಸಮಯದಲ್ಲಿ ನೀಡಿದ ಭರವಸೆಗಳನ್ನು ಮರೆತಂತೆ ನಟಿಸಿ,




ಮುಂಬರುವ ಚುನಾವಣೆಗೆ ಇಂದಿನಿಂದಲೇ ಸಂಪನ್ಮೂಲ ಕ್ರೋಢೀಕರಿಸುವ ಪ್ರಯತ್ನಕ್ಕೆ ಕೈಹಾಕುವ ಧಾರ್ಷ್ಟ್ಯ ಉಳ್ಳವರಿಗೆ ತಕ್ಕ ಪಾಠ ಕಲಿಸುವ ಸಮಯ ಇದಾಗಿದೆ.

ತತ್‌ಕ್ಷಣಕ್ಕೆ ಹಣದ ಆಮಿಷ ಮತ್ತು ಭ್ರಷ್ಟಾಚಾರವನ್ನು ಹೊಡೆದೋಡಿಸಲು ಆಗದೇ ಇರಬಹುದು, ಯಾವುದೇ ಬದಲಾವಣೆಯು ಒಂದೇ ದಿನದಲ್ಲಿ, ಒಂದೇ ವರ್ಷದಲ್ಲಿ, ಒಮ್ಮಿಂದೊಮ್ಮೆಲೇ ಆಗುತ್ತದೆಂಬ ಭ್ರಮೆ ಇಟ್ಟುಕೊಳ್ಳದೇ, ನಿರಂತರವಾಗಿ, ಇಂತಹ ಪ್ರಯತ್ನಗಳು ನಡೆಯುತ್ತಿದ್ದರೆ, ಬದಲಾವಣೆಯ ಗಾಳಿ ಬೀಸುವುದರಲ್ಲಿ ಯಾವುದೇ ಸಂಶಯವಿಲ್ಲ. ಚುನಾವಣಾ ಆಯೋಗದ 'ಸ್ವೀಪ್' ಕಾರ್ಯಕ್ರಮ ತನ್ನ ಹೆಸರಿಗೆ ತಕ್ಕಂತೆ ಕೊಳೆಯನ್ನೆಲ್ಲಾ ಗುಡಿಸಿ ಹಾಕಿ, ಕಳೆಗಳನ್ನೆಲ್ಲಾ ಕಿತ್ತು ಹಾಕಿ, ಸ್ವಚ್ಛ-ಸಶಕ್ತ-ಸದೃಢ ಆಡಳಿತ ಯಂತ್ರ ರೂಪಿಸುವಲ್ಲಿ ಜಾಗೃತಿ ಮೂಡಿಸುವತ್ತ ಕೇವಲ ಚುನಾವಣಾ ಸಮಯದಲ್ಲಿ ಮಾತ್ರವಲ್ಲದೇ ನಿರಂತರವಾಗಿ ಜನಭಾಗವಹಿಸುವಿಕೆಯ ನ್ನೊಳಗೊಂಡ ಜಾಗೃತಿ ಕಾರ್ಯಕ್ರಮ ನಡೆಸುವಂತಾಗಬೇಕು. ನಮ್ಮ ಮುಂದಿರುವ ಚುನಾವಣೆಯೆಂಬ ಮಹತ್ತರ ಜವಾಬ್ದಾರಿಯನ್ನು ಪ್ರಜ್ಞಾವಂತ ಮತದಾನದ ಮೂಲಕ ಅತ್ಯಂತ ಮುತುವರ್ಜಿಯಿಂದ ನಿರ್ವಹಿಸಿ, ಇಡೀ ರಾಜ್ಯದ ವ್ಯವಸ್ಥೆಯನ್ನು ಭದ್ರ ಬುನಾದಿಯ ಮೇಲೆ ಕಟ್ಟೋಣ, ನೈಜ ಗಣರಾಜ್ಯವನ್ನು ಸಾಧಿಸೋಣ; ಪ್ರಜಾಪ್ರಭುತ್ವವನ್ನು ಗೌರವಿಸೋಣ, ಅದರ ಆಶಯವನ್ನು, ಸಾರವನ್ನು ಸದಾ ಆಚರಿಸೋಣ. ■